ತೋಟದಲ್ಲಿ ಅಡಿಕೆ ಕುಯ್ಲು... ನಾನು ಬಂದೇನು ಮಾಡೋದಿದೆ ಇಷ್ಟಕ್ಕೂ...' ಹೇಳುತ್ತಲೇ ನಿದ್ರೆಗೆ ಜಾರಿದ್ದ. ಅಮ್ಮ ಅಪ್ಪ ಎಲ್ಲ ಸಂಭ್ರಮ ಪಟ್ಟಿದ್ದರು. ಸುಮತಿ ಪ್ರೌಢಳಾಗಿದ್ದಳು. ಅವಳಿಗೂ ಗಂಡು ಹುಡುಕತೊಡಗಿದ್ದರು. ಯಾರನ್ನೂ ಅವಳು ಒಪ್ಪಲಿಲ್ಲ. ಬಿಡುವಿದ್ದರಿಂದ ಅವಳೇ ಆಗಾಗ ಮನೆಗೆ ಬಂದು ಹೋಗುತ್ತಿದ್ದಳು. ಅಮ್ಮ ತಿಂಡಿ ಮಾಡಿ ಮಾಡಿ ಕಳುಹಿಸುತ್ತಿದ್ದರು. ಏಳನೆಯ ತಿಂಗಳಲ್ಲಿ ಸೀಮಂತ ಮಾಡಿ ತವರಿಗೆ ಕಳುಹಿಸಬೇಕು ಎಂದು ಎಲ್ಲರೂ ಮಾತಾಡುತ್ತಿದ್ದರು. ನನಗೆ ಆರನೇ ತಿಂಗಳು ನಡೆಯುತ್ತಿತ್ತು. ನನ್ನ ಸಮಸ್ತ ಮನಸ್ಸನ್ನೂ ಅರಿಯುವ ಒಂದು ಜೀವ ಈ ಭೂಮಿಗೆ ಬರುತ್ತೆ ಎಂಬುದೊಂದೇ ನನ್ನ ದೊಡ್ಡ ಖುಷಿ. ಈ ಮಗು ಬಂದ ನಂತರ ನನ್ನ ಜಗತ್ತು, ಬದುಕು ಎಲ್ಲವೂ ಒಂದು ಅರ್ಥ ಪಡೆದುಕೊಳ್ಳುತ್ತೆ ಎನ್ನುವ ಭಾವ ರಾಶಿಯಾಗಿ ಕಾಡುತ್ತಿತ್ತು.

ಆವತ್ತು ಆಸ್ಪತ್ರೆಗೆ ಹೋಗಿ ಬರಬೇಕಿತ್ತು. ಅಲ್ಲಿ ಕಾಯುತ್ತ ಕುಳಿತಿದ್ದಾಗ ಬಂದವನೇ ಕುಮಾರ. ನಾನು ಅವನು ಒಂದನೇ ಇಯತ್ತೆಯಲ್ಲಿ ಕುಂಟಂಬಿಲ್ಲೆ ಆಡುತ್ತಿದ್ದೆವಂತೆ. ಅದೂ ಕೂಡ ನನಗೆ ಮರೆತೇ ಹೋಗಿತ್ತು. ಅವನ ಹೆಂಡತಿಯನ್ನು ಒಳಗೆ ತಪಾಸಣೆಗೆ ಕಳುಹಿಸಿ ನನ್ನೊಂದಿಗೆ ಮಾತಿಗಿಳಿದಿದ್ದ. ಅವನದು ಚೇಷ್ಟೆಯ ಮಾತು.

ಹಾಗೆ ಮಾತನಾಡುವಾಗ 'ಹೌದು... ಭಾವ ಏನು ನೋಡಿ ಮರುಳಾದದ್ದು. ಬಣ್ಣ ನೋಡಿಯೋ, ರೂಪ ನೋಡಿಯೋ, ಕೂದಲ ಉದ್ದ ನೋಡಿಯೋ...' ಅಂದು ಜೋರಾಗಿ ನಕ್ಕ. ನಾನು ಕೂಡ ಮೆಲುನಗೆ ನಕ್ಕೆ. ಹಾಗೇ ಅವನ ಹೆಂಡತಿಯ ಕುರಿತು ಚೇಷ್ಟೆ ಮಾಡಿದ್ದೆ 'ಹೌದು ಅಣ್ಣ, ಏನು ನೋಡಿ ಅತ್ತಿಗೆಗೆ ಮರುಳಾಗಿದ್ದು? ಬಣ್ಣ, ಕೂದಲು... ರೂಪ...' ಅಂತ. ಅವನು ಮತ್ತೆ ನಕ್ಕ. ಕೆಲವು ಸಿನಿಮಾ ಕಥೆ, ಸನ್ನಿವೇಶ... ಹೀಗೆ ಅವನೊಂದಿಗೆ ಚೇಷ್ಟೆಯ ಮಾತುಗಳು ಮುಂದುವರಿದವು. ನಮ್ಮ ನಗು ಕೂಡ ಹೆಚ್ಚಾಯಿತು. ನನ್ನೊಳಗೆ ಹಂಚಿಕೊಳ್ಳ ಬಯಸಿದ ಅನೇಕ ವಿಷಯಗಳನ್ನು ಹೇಳಿಕೊಳ್ಳುತ್ತಾ ನಾನೂ ನಕ್ಕೆ. ಬಹುಶಃ ನಾನು ಹಾಗೆಲ್ಲ ನಕ್ಕಿದ್ದು ಅದೇ ಮೊದಲು ಮತ್ತು ಅದೇ ಕೊನೆಯೂ ಆಗಿಬಿಟ್ಟಿತು. ಅಲ್ಲೇ ಕುಳಿತಿದ್ದ ಹಳ್ಳಿ ಜನ ಏನಂದುಕೊಂಡರೋ, ನನ್ನ ಗಂಡನ ಕಿವಿಗೆ ಏನೆಂದು ತಲುಪಿತೋ... ಗೊತ್ತಿಲ್ಲ. ನಾನು ಮನೆಗೆ ಬರುವಾಗ ಕೂಡ ನನ್ನ ಮುಖ ನಗುವಿನಿಂದ ಅಗಲವೇ ಆಗಿತ್ತು... ಕೋಣೆಗೆ ಹೋಗಿ ಬಟ್ಟೆ ಬದಲಿಸಿದಾಗ ಇವರು ಒಳಗೆ ಬಂದರು.

ಡಾಕ್ಟರ್ ಏನೆಂದರು? ಕೇಳಲಿಲ್ಲ. ಯಾರು ನಿನ್ನೊಟ್ಟಿಗಿದ್ದರು? ಆರು ತಿಂಗಳ ಗರ್ಭಿಣಿ ಹೆಣ್ಣು ಒಬ್ಬಳೇ ಹೋಗಿ ಬಂದೆಯಲ್ಲ... ಎಲ್ಲಾದರೂ ಎಡವಿ ಬಿದ್ದರೆ ಏನು ಗತಿ? ವಿಚಾರಿಸಲಿಲ್ಲ. ಅವರು ಕೇಳಿದ್ದು 'ಅವನು ಯಾರು?' ಆ ಗಡುಸಿಗೆ ಬೆಚ್ಚಿಬಿದ್ದೆ. ನನ್ನೊಳಗಿನ ಬೃಂದಾವನದ ಹೂ ನಡುಗಿತು. 'ಯಾ... ರು?' ತೊದಲಿದೆ.

'ಊಂ... ತೊದಲುವಾಗಲೇ ಗೊತ್ತಾಗುತ್ತೆ ಅವನು ಯಾರು ಅಂತ. ಎಷ್ಟು ದಿನದಿಂದ ನಡೀತಿದೆ ಈ ವ್ಯವಹಾರ?'

'ಯಾ... ವ ವ್ಯವಹಾರ...' ನನಗೆ ಕಣ್ಣು ಕಣ್ಣು ಬಿಡುವಂತಾಗಿತ್ತು. 'ಹೇಳೇ... ಎಷ್ಟು ದಿನದಿಂದ ಹೊಂಚು ಹಾಕುತ್ತಿದ್ದೆ ನನ್ನ ಮರ್ಯಾದೆ ಕಳೆಯಲು. ಮನೆಯ ಹಿರಿ ಸೊಸೆ ಹಾದರ ಮಾಡ್ತಾಳೆ ಅಂದ್ರೆ ನಾಳೆ ತಲೆಯೆತ್ತಿ ತಿರುಗೋದು ಹೇಗೆ? ಪಕ್ಕದ ತೋಟದ ಸತೀಶ ಹೇಳಿ ಹೇಳಿ ನಗ್ತಿದ್ದಾನೆ ಗೊತ್ತಾ ನಿಂಗೆ... ಏನು ರೋಗ ಬಂದಿದೆ ನಿನಗೆ. ಕಂಡ ಕಂಡ ಗಂಡಸರ ಜೊತೆ ನಗೋದಕ್ಕೆ. ಅದೂ ಅಷ್ಟು ಜನರ ಇದಿರಿನಲ್ಲಿ... ಹೊಟ್ಟೆಯಲ್ಲಿ ಮಗು ಇದೆ ಅನ್ನೋ ಜ್ಞಾನಾನಾದ್ರೂ ಬೇಡ್ವ ನಿನಗೆ...' ದಪ್ಪ ಗಂಟಲಿನಲ್ಲಿ ಧಡ ಧಡ ಅವನು ಬೈಯ್ಯುತ್ತಿದ್ದರೆ ನನ್ನ ಎದೆಯೊಳಗೆ ದೊಡ್ಡ ದೊಡ್ಡ ಆಲಿಕಲ್ಲುಗಳ ಅಬ್ಬರ. ಅಳಲು ಕೂಡ ಮರೆತು ಹೋಯಿತು. ಅವನ ಒಂದು ಶಬ್ದ... 'ಹಾದರ... ಹಾದರ...